ಶ್ರೀ ಆರ್. ಶ್ರೀನಿವಾಸ್ :– ಈ ವರ್ಷ 1500 ಕೋಟಿ ರೂಪಾಯಿ ಒಟ್ಟಾರೆಯಾಗಿ, ನಂಜುಂಡಪ್ಪನವರ ವರದಿ ಪ್ರಕಾರ 39 ತಾಲ್ಲೂಕುಗಳು ಏನು ಹಿಂದುಳಿದಿವೆ, ಆ ತಾಲ್ಲೂಕುಗಳು ಸರ್ವತೋಮುಖ ಅಭಿವೃದ್ಧಿಗೆ 1500 ಕೋಟಿ ರೂಪಾಯಿಗಳನ್ನು ಮೀಸಲಾಗಿರಿಸಿದ್ದೇವೆ.

ಡಾ॥ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ :– ಮಾನ್ಯ ಅಧ್ಯಕ್ಷರೇ ನೀವೇ ಇದಕ್ಕೆ ಸಾಕ್ಷಿಯಾಗಿದ್ದೀರಿ, ಏಕೆಂದರೆ ಮುಂದೆ ಯಾವ ತೊಂದರೆ ಬರಬಾರದು ಬಜೆಟ್‌ನಲ್ಲಿ ಪ್ರಾವಿಜನ್ ಇಲ್ಲ.

ಶ್ರೀ ಆರ್. ಶ್ರೀನಿವಾಸ್ :– ಬಜೆಟ್‌ನಲ್ಲಿ ಪ್ರಾವಿಜನ್ ಇಡುವುದಕ್ಕಾಗಿಯೇ ಈ ಯೋಜನೆಯನ್ನು ತಯಾರು ಮಾಡುತ್ತಿದ್ದೇವೆ. ಈ ಯೋಜನೆಯ ಮೂಲಕ ತಮ್ಮ ಕೆಲಸವನ್ನು ಅನುಷ್ಠಾನಗೊಳಿಸುವುದಕ್ಕೆ ಬಯಸುತ್ತೇನೆ.

ಡಾ॥ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ :– 1500 ಕೋಟಿ ರೂಪಾಯಿ ಕೊಟ್ಟರೆ ನಮಗೆ ಖೂಷಿ ಇದೆ, ಇದಕ್ಕಾಗಿ ನಾವು ಸ್ವಾಗತ ಮಾಡುತ್ತೇವೆ.

<u>ವಿದ್ಯಾರ್ಥಿಗಳ ಬಸ್‌ಪಾಸ್ ದರ ಏರಿಕೆ :–</u>

104 (949) ಶ್ರೀ ಪದ್ಮನಾಭ ಕೊಟ್ಟಾರಿ ಕೆ. (ವಿಟ್ಲ) :– ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2007–08 ನೇ ಸಾಲಿಗೆ ಕಾಲೇಜು ವಿದ್ಯಾರ್ಥಿಗಳ ಬಸ್ ಪಾಸ್ ದರವನ್ನು ಎಷ್ಟು ರೂಪಾಯಿಗಳಿಗೆ ಏರಿಸಲಾಗಿದೆ; ಈ ಹಿಂದೆ ಇದ್ದ ದರ ಮತ್ತು ಈಗಿನ ದರ ಎಷ್ಟು;

ಆ) ಬಸ್ ಪಾಸ್ ದರವನ್ನು ಏರಿಸಲು ಕಾರಣವೇನು;

ಇ) ಗ್ರಾಮೀಣ ಪ್ರದೇಶದ ಬಡ ವಿದ್ಯಾರ್ಥಿಗಳಿಗೆ ಇದರಿಂದ ಬಹಳಷ್ಟು ಸಮಸ್ಯೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಸರ್ಕಾರವು ವಿದ್ಯಾರ್ಥಿಗಳಿಗೆ ಅನೇಕ ಯೋಜನೆಗಳ ಮೂಲಕ ಶಿಕ್ಷಣಕ್ಕೆ ಒತ್ತುಕೊಡುವ ಕೆಲಸ ಮಾಡುತ್ತಾ ಇನ್ನೊಂದು ಕಡೆಯಿಂದ ಬಸ್ ಪಾಸ್ ದರ ಏರಿಸಿ ವಿದ್ಯಾರ್ಥಿಗಳಿಗೆ ಅನ್ಯಾಯ ಮಾಡಿದಂತಾಗುವುದಿಲ್ಲವೇ;

ಉ) ಹಾಗಿದ್ದಲ್ಲಿ, ಹೆಚ್ಚುವರಿ ವಸೂಲು ಮಾಡಿದ ಹಣವನ್ನು ಹಿಂತಿರುಗಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಎನ್. ಚೆಲುವರಾಯಸ್ವಾಮಿ (ಸಾರಿಗೆ ಸಚಿವರು) :

ಅ)

ವಿವರ	ಹಿಂದಿನದರ 2006–07	ಹೆಚ್ಚಿಸಿದದರ	ಈಗಿನ ದರ 2007–08
ಕಾಲೇಜು/ ಐಟಿಐ	700.00	1070.00	900.00
ವೃತ್ತಿಪರ	1000.00	1570.00	1400.00
ಸಂಜೆ ಕಾಲೇಜು	1250.00	1750.00	1500.00

ಆ) ಬಸ್ ಪಾಸ್ ವೆಚ್ಚ ಶೇ. 25 ರಷ್ಟನ್ನು ವಿದ್ಯಾರ್ಥಿಗಳು ಭರಿಸಬೇಕಾಗಿದ್ದು, ಈ ಕಾರಣಕ್ಕಾಗಿ ಬಸ್ ಪಾಸ್ ದರ ಏರಿಸಲಾಗಿತ್ತು.

ಇ) ಹೌದು. ಈಗ ಕಾಲೇಜು ಬಸ್ ಪಾಸ್ ದರದಲ್ಲಿ ಇಳಿಕೆ ಮಾಡಲಾಗಿದೆ.

ಈ) ಸಾಮಾನ್ಯ ಪ್ರಯಾಣ ದರದಲ್ಲಿ. ಶೇ. 82.3 ರಷ್ಟು ಪ್ರಯಾಣ ದರ ರಿಯಾಯಿತಿ ನೀಡಲಾಗಿರುತ್ತದೆ.

ಉ) ಹೆಚ್ಚುವರಿ ವಸೂಲಿ ಮಾಡಿದ ಹಣವನ್ನು ಹಿಂತಿರುಗಿಸಲು ಈಗಾಗಲೇ ಕ್ರಮ ಕೈಗೊಳ್ಳಲಾಗಿದೆ.

ಶ್ರೀ ಕೆ. ಪದ್ಮನಾಭ ಕೊಟ್ಟಾರಿ :– ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿಕೊಟ್ಟಿದ್ದಾರೆ. ಆದರೆ, ಕಾಲೇಜು ವಿದ್ಯಾರ್ಥಿಗಳಿಗೆ 2006–07 ನೇ ಸಾಲಿನಲ್ಲಿ ಬಸ್‌ಪಾಸ್‌ದರ 700 ರೂಪಾಯಿ ಇದ್ದುದನ್ನು ಈ ವರ್ಷ 1070 ರೂಪಾಯಿ ಮಾಡಿದ್ದಾರೆ. ಮತ್ತೆ ಈಗಿನ ದರ 900 ರೂ. ಎಂದು ಹೇಳಿದ್ದಾರೆ. ಮತ್ತೆ ವೃತ್ತಿಪರ ಶಿಕ್ಷಣ ವಿದ್ಯಾರ್ಥಿಗಳಿಗೆ 2006–07 ನೇ ಸಾಲಿನಲ್ಲಿ 1000 ರೂ. ಇದ್ದುದನ್ನು 1570 ಕ್ಕೆ ಏರಿಸಿ ಮತ್ತೆ 170 ರೂ. ಕಡಿಮೆ ಮಾಡಿ 1400 ರೂ.ಗಳನ್ನು ಮಾಡಿದ್ದಾರೆ. ಮತ್ತೆ ಸಂಜೆ ಕಾಲೇಜು ವಿದ್ಯಾರ್ಥಿಗಳಿಗೆ ಹಿಂದಿನ ವರ್ಷ 1250 ರೂಪಾಯಿ ಇತ್ತು. ಈ ವರ್ಷ 1750 ರೂಪಾಯಿಗಳಿಗೆ ಏರಿಸಿ ಮತ್ತೆ ಅದರಲ್ಲಿ 250 ರೂ. ಕಡಿಮೆ ಮಾಡಿ 1500 ರೂ. ಮಾಡಿದ್ದಾರೆ. ಕಡಿಮೆ ಮಾಡಿರುವ ದರದ ಬಗ್ಗೆ ಹೇಳುವುದಾದರೆ, ವೃತ್ತಿಪರ ಶಿಕ್ಷಣಕ್ಕೆ ಹೋಗುವ ವಿದ್ಯಾರ್ಥಿಗಳಿಗೆ 1570 ರೂ. ಬಸ್ ದರವನ್ನು ಏರಿಕೆ ಮಾಡಿ 170 ರೂ. ಕಡಿಮೆ ಮಾಡಿ 1400 ರೂ. ನಿಗದಿ ಮಾಡಿದ್ದಾರೆ. ಕೆಳಗೆ ಮತ್ತು ಮೇಲಿನ ಅಂತರದಲ್ಲಿ ಕಡಿಮೆ ಮಾಡಿ ಸಂಜೆ ಕಾಲೇಜು ವಿದ್ಯಾರ್ಥಿಗಳಿಗೂ ದರ ಕಡಿಮೆ ಮಾಡಿದ್ದಾರೆ, ಆದರೆ, ವೃತ್ತಿಪರ

ವಿದ್ಯಾರ್ಥಿಗಳಿಗೆ ಇನ್ನೂ 150 ರೂ.ಗಳಷ್ಟು ಕಡಿಮೆ ಮಾಡಬೇಕಾಗಿತ್ತು. ಅಂದರೆ, ಈಗ ಇರುವ ದರವನ್ನು 1250 ರೂಪಾಯಿಗಳಿಗೆ ಮಾಡಬೇಕಾಗಿತ್ತು. ಆದ್ದರಿಂದ, ಇದರ ಬಗ್ಗೆ ಸನ್ಮಾನ್ಯ ಸಚಿವರು ಉತ್ತರ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎನ್. ಚೆಲುವರಾಯಸ್ವಾಮಿ :– ಮಾನ್ಯ ಅಧ್ಯಕ್ಷರೆ, ಈಗಾಗಲೇ ವಿದ್ಯಾರ್ಥಿಗಳಿಗೆ ಸರ್ಕಾರಿ ಮತ್ತು ಸಾರಿಗೆ ಸಂಸ್ಥೆಯಿಂದ 75% ನಷ್ಟು ರಿಯಾಯಿತಿ ಕೊಟ್ಟು 25% ನಷ್ಟು ವಿದ್ಯಾರ್ಥಿಗಳು ಕಟ್ಟಬೇಕೆಂದು ಹತ್ತಾರು ವರ್ಷಗಳ ಹಿಂದೆಯೇ ಆದೇಶವಾಗಿತ್ತು. ಆದರೆ, ಈಗ ವಿದ್ಯಾರ್ಥಿಗಳು 17.7% ನಷ್ಟು ಕಟ್ಟುತ್ತಿದ್ದಾರೆ. ಸಾರಿಗೆ ಸಂಸ್ಥೆ ಮತ್ತು ಸರ್ಕಾರದಿಂದ 82.3% ನಷ್ಟು ಅವರಿಗೆ ರಿಯಾಯತಿ ಕೊಡುತ್ತಿದ್ದೇವೆ. ಆದ್ದರಿಂದ, 25% ಮುಟ್ಟದಿರುವುದರಿಂದ ಸ್ವಲ್ಪ ಜಾಸ್ತಿ ಮಾಡಿದ್ದೇವೆ. ಮತ್ತೆ ಅದನ್ನೂ ಸಹ ಅವರ ಬೇಡಿಕೆ ಮತ್ತು ಎಲ್ಲರ ಒತ್ತಾಯದಿಂದ ಮೊನ್ನೆ ದಿವಸ ಕಡಿಮೆ ಮಾಡಲಾಗಿದೆ. ಮತ್ತೆ ಹೆಚ್ಚುವರಿಯಾಗಿ ತೆಗೆದುಕೊಂಡಿರತಕ್ಕಂಥದನ್ನು ಮತ್ತೆ ಅವರಿಗೆ ವಾಪಸ್ಸು ಕೊಡುವುದಕ್ಕೆ ತೀರ್ಮಾನ ಕೂಡ ತೆಗೆದುಕೊಂಡಿದ್ದೇವೆ.

ಶ್ರೀ ಕೆ. ಪದ್ಮನಾಭ ಕೊಟ್ಟಾರಿ :– ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಿಗೆ ಹೆಚ್ಚಿನ ಸವಲತ್ತುಗಳನ್ನು ಕೊಡಬೇಕೆಂದು ನಾನು ಇಲ್ಲಿ ಉಲ್ಲೇಖ ಮಾಡಿದ್ದೇನೆ. ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಿಗೆ ಇದರಲ್ಲಿ ಹೆಚ್ಚಿಗೆ ಸವಲತ್ತು ಸಿಕ್ಕಿರತಕ್ಕಂಥದ್ದು ಕಾಣುತ್ತಿಲ್ಲ. ಆದ್ದರಿಂದ, ಇದಕ್ಕೆ ಸನ್ಮಾನ್ಯ ಸಚಿವರು ಉತ್ತರ ಕೊಡಬೇಕೆಂದು ಕೇಳುತ್ತೇನೆ. ಮತ್ತೆ ಈಗಾಗಲೇ ಹೆಚ್ಚುವರಿಯಾಗಿ ವಸೂಲು ಮಾಡಿರುವಂಥ ಹಣವನ್ನು ಹಿಂತಿರುಗಿಸಲಾಗುತ್ತದೆಂದು ಹೇಳಿದ್ದಾರೆ. ಆದ್ದರಿಂದ, ಯಾವ ತಿಂಗಳೊಳಗೆ ಮತ್ತೆ ಅದನ್ನು ಹಿಂತಿರುಗಿಸಲಾಗುತ್ತದೆ ಎನ್ನತಕ್ಕಂಥದ್ದನ್ನು ಮಾನ್ಯ ಸಚಿವರು ತಿಳಿಸಬೇಕೆಂದು ತಮ್ಮ ಮುಖಾಂತರ ಅವರಲ್ಲಿ ನಾನು ವಿನಂತಿ ಮಾಡುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ :– ಮಾನ್ಯ ಅಧ್ಯಕ್ಷರೆ, ಕೆಎಸ್ಆರ್‌ಟಿಸಿ ಸಂಸ್ಥೆ ಲಾಭದಲ್ಲಿದೆ. ಲಾಭದಲ್ಲಿದ್ದಾಗ ಮತ್ತು ಡೀಸೆಲ್ ಬೆಲೆ ಕಡಿಮೆಯಾದ ನಂತರವೂ ಬಸ್ ದರ ಮತ್ತು ವಿದ್ಯಾರ್ಥಿಗಳ ಪಾಸ್ ದರವನ್ನು ಜಾಸ್ತಿ ಮಾಡತಕ್ಕಂಥ ಅವಶ್ಯಕತೆ ಇತ್ತು ಎನ್ನತಕ್ಕಂಥದ್ದರ ಬಗ್ಗೆ ಸಾರ್ವಜನಿಕವಾಗಿ ಭಾರಿ ಟೀಕೆ ಇವೆ. ಈಗ ನಮಗೂ ಸಹ ಅನಿಸುವುದೇನೆಂದರೆ, ಡೀಸೆಲ್ ರೇಟ್ ಕಡಿಮೆಯಾಗಿದೆ ಮತ್ತೆ profit making organization ಎಂದು ನೀವು ಈಗ ಹೇಳಿಕೆಯನ್ನು ಕೊಡುತ್ತಿದ್ದೀರಿ. ಇಷ್ಟೆಲ್ಲಾ ಇರುವಾಗ ಸ್ವಲ್ಪ ಸರ್ವಿಸ್ ಕೊಡುವುದಕ್ಕೆ ನಿಮಗೆ ಏನು ತೊಂದರೆ? ಮತ್ತೆ ಬಸ್ ದರವನ್ನು ಏತಕ್ಕೆ ಜಾಸ್ತಿ ಮಾಡುತ್ತಿದ್ದೀರಿ? ಮತ್ತೆ ಯಾವುದೇ

ರೂಟ್‌ನಲ್ಲಿ 3 ತಿಂಗಳು ಬಸ್ ಓಡಿಸಿ ಆನಂತರ ವಯಬಲ್ ರೂಟ್ ಅಲ್ಲವೆಂದು ನಿಲ್ಲಿಸುತ್ತೀರಿ. ಈ ರೀತಿಯಾದರೆ ಹಳ್ಳಿ ಜನ ಉದ್ಧಾರವಾಗುವುದು ಯಾವಾಗ? ನಾವೆಲ್ಲಾ ವಯಬಲ್ ರೂಟ್‌ನಲ್ಲಿ ಬರುವುದಕ್ಕೆ ಆಗುವುದಿಲ್ಲ. ಇಂಥ ಕಡೆ ಬಸ್ ಓಡಿಸುವುದಕ್ಕೆ ಏನು ತೊಂದರೆ? ಮತ್ತೆ ಹೆಚ್ಚು ಹಣ ಮಾಡಿದಾಗ ಅದನ್ನು ಆಶಕ್ತರು ಇರುವ ಕಡೆ ಬಳಸುವುದಕ್ಕೆ ಏನು ತೊಂದರೆ? ಮತ್ತೆ ಲಾಭದಲ್ಲಿದ್ದಾಗಲೂ ಕೂಡ ಬಸ್ ದರವನ್ನು ಜಾಸ್ತಿ ಮಾಡುವುದಕ್ಕೆ ಕಾರಣವೇನು ಎಂಬುದರ ಬಗ್ಗೆ ದಯಮಾಡಿ ತಿಳಿಸಬೇಕು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :- ಮಾನ್ಯ ಅಧ್ಯಕ್ಷರೇ, ಬಸ್ ಪಾಸ್ ದರದ ವಿರುದ್ಧ ಹೋರಾಟ ನಡೆಸಿದಾಗ ಕಡಿಮೆ ಮಾಡುತ್ತೇನೆಂದು ಇವರು ಹೇಳಿ 30% ಕಡಿಮೆ ಮಾಡಿದ್ದಾರೆ. ಆದರೆ, ಯಾವ ರೀತಿಯಾಗಿ ಮಾಡಿದ್ದಾರೆಂದರೆ, ಕಳೆದ ವರ್ಷ 700 ರೂ. ಇರತಕ್ಕಂಥದ್ದನ್ನು 1070 ರೂ. ಮಾಡಿದ್ದಾರೆ. ಮತ್ತೆ ಸಂಜೆ ಕಾಲೇಜು ವಿದ್ಯಾರ್ಥಿಗಳಿಗೆ ಕಳೆದ ವರ್ಷ 1250 ರೂ. ಇತ್ತು. ಆದರೆ, ಅದನ್ನು 1750 ರೂ. ಮಾಡಿದ್ದಾರೆ. ಕೆಎಸ್‌ಆರ್‌ಟಿಸಿ ಸಂಸ್ಥೆ ಲಾಭ-ನಷ್ಟದ ಬಗ್ಗೆ ಲೆಕ್ಕ ಹಾಕಬಾರದು. ಕೆಎಸ್‌ಆರ್‌ಟಿಸಿ ಎಂದರೆ ಇದೊಂದು ಸರ್ವಿಸ್ ಕೊಡತಕ್ಕಂಥ ಸಂಸ್ಥೆಯಾಗಿದೆ. ಅದು ಜನರಿಗೆ no loss no profit ಆಧಾರ ಇಟ್ಟುಕೊಂಡು ಜನರಿಗೆ ಸರ್ವಿಸ್ ಕೊಡಬೇಕು. ಕೇವಲ ಲಾಭ ಮಾಡಬೇಕೆಂಬ ಒಂದೇ ಉದ್ದೇಶ ಇದ್ದರೆ ಅದು ಸಾರ್ವಜನಿಕ ಸೇವೆಯಾಗುವುದಿಲ್ಲ. ವಿದ್ಯಾರ್ಥಿಗಳ ಜೊತೆ ನೀವೇ ಮಾತುಕತೆ ಮಾಡಿ ಕಡಿಮೆ ಮಾಡುತ್ತೇನೆಂದು ಹೇಳಿದ್ದೀರಿ. ಆದರೆ, ನೀವು ಕಡಿಮೆ ಮಾಡಿರುವುದು ಎಷ್ಟು? ದಯವಿಟ್ಟು ಈಗ ಮಾಡಿರುವ ದರವನ್ನು ರದ್ದು ಮಾಡಿ ಕಳೆದ ವರ್ಷ ಇದ್ದಂಥ ದರವನ್ನೇ ಮತ್ತೆ ಮಾಡಿ. ವಿದ್ಯಾರ್ಥಿಗಳ ಮೇಲೆ ಏಕೆ ಹೊರೆ ಹಾಕುವುದಕ್ಕೆ ಹೋಗುತ್ತೀರಿ.

ಶ್ರೀ ನೆ.ಲ. ನರೇಂದ್ರ ಬಾಬು :- ಮಾನ್ಯ ಅಧ್ಯಕ್ಷರೆ, ಮಾನ್ಯ ಸಾರಿಗೆ ಸಚಿವರಲ್ಲಿ ನಾನು ವಿನಂತಿ ಮಾಡುವುದೇನೆಂದರೆ, ವಿದ್ಯಾರ್ಥಿಗಳು ಓದಲೆಂದು ಮಧ್ಯಾಹ್ನದ ಊಟ ಪ್ರಾರಂಭ ಮಾಡುತ್ತೀರಿ ಮತ್ತೆ ಇದನ್ನು ಕಾಲೇಜಿಗೂ ವಿಸ್ತರಿಸಬೇಕೆಂಬ ವಿಶಾಲ ಮನೋಭಾವ ಸರ್ಕಾರಕ್ಕೆ ಇರುತ್ತದೆ. ಈ ಸಂದರ್ಭದಲ್ಲಿ ನಾನು ವಿನಂತಿ ಮಾಡುವುದೇನೆಂದರೆ, ಗುಬ್ಬಿ ಮೇಲೆ ಏಕೆ ಬ್ರಹ್ಮಾಸ್ತ್ರ ಈಗ ಡೀಸೆಲ್ ಬೆಲೆ ಕಡಿಮೆಯಾಗಿದೆ. ರಿಬೇಟ್ಸ್ ನೀಡಿದ್ದೇವೆಂದು ತಾವು ಏನು ಮಾಡಿದ್ದೀರೆಂದರೆ, 1070 ರೂಪಾಯಿಗೆ ದರವನ್ನು ಹೆಚ್ಚಿಸಿ 900 ರೂಪಾಯಿಗೆಂದು ನಿಗದಿ ಮಾಡಿದ್ದೀರಿ. ಆದರೆ, ಮೊದಲ ದರಕ್ಕಿಂತ 200 ರೂ. ಜಾಸ್ತಿಯೇ ಆಯಿತು. ಇದು ಹೇಗಾಗಿದೆಂದರೆ,

ಮೆಜಸ್ಟಿಕ್‌ನ ಫುಟ್‌ಪಾತ್‌ನಲ್ಲಿ ರಿಬೇಟ್ ಸೇಲ್ ರೀತಿಯಲ್ಲಿದೆ. ಅಂದರೆ, ರಿಬೇಟ್ ಕೊಟ್ಟಂತೆ ಕೂಡ ಇರಬೇಕು ಮತ್ತೆ ರೇಟ್ ಕೂಡ ಜಾಸ್ತಿಯಾಗಬೇಕು, ಆ ರೀತಿಯಲ್ಲಿ ನೀವು ಕೂಡ ಮಾಡಿದ್ದೀರಿ. ತಾವು ಯುವಕರಿದ್ದೀರಿ, ಆದ್ದರಿಂದ ವಿದ್ಯಾರ್ಥಿಗಳ ಬಗ್ಗೆ ಅರ್ಥ ಮಾಡಿಕೊಂಡು ಹೆಚ್ಚಿಸಿರುವ ದರವನ್ನು ಇಳಿಸಿ. ಏಕೆಂದರೆ, ಮತ್ತೆ ಡೀಸೆಲ್ ಬೆಲೆ ಕೂಡ ಕಡಿಮೆಯಾಗಿದೆ.

ಶ್ರೀ ಎನ್. ಚೆಲುವರಾಯಸ್ವಾಮಿ :– ಮಾನ್ಯ ಅಧ್ಯಕ್ಷರೆ, ಮಾನ್ಯ ಹಿರಿಯ ಸದಸ್ಯರುಗಳು ಹೇಳಿರುವ ವಿಚಾರದಲ್ಲಿ ನನಗೆ ಬಹಳ ಗೌರವ ಇದೆ. ಸರ್ಕಾರ ಮತ್ತು ಸಾರಿಗೆ ಸಂಸ್ಥೆ ಈಗಾಗಲೇ 75% ನಷ್ಟು ಡಿಕ್ಲೇರ್ ಮಾಡಿದೆ. 75% ಗಿಂತ ಕಡಿಮೆ ರಿಯಾಯಿತಿ ಕೊಡುತ್ತೇವೆಂದರೆ ತಾವು ಹೇಳತಕ್ಕಂಥದರಲ್ಲಿ 100 ಕ್ಕೆ 100 ರಷ್ಟು ಸತ್ಯವಾಗಿರುತ್ತದೆ. ಇದರಲ್ಲಿ ಎರಡು ಮಾತಿಲ್ಲ. ವಿದ್ಯಾರ್ಥಿಗಳು 25% ನಷ್ಟು ಕೊಡಬೇಕೆಂದು ಅವರ ಜೊತೆ ನಮ್ಮ ಒಪ್ಪಂದ ಆಗಿತ್ತು. ಆ ಪ್ರಕಾರ ಕೊಟ್ಟು ಹೆಚ್ಚು ಮಾಡಿದ್ದರೆ ತಪ್ಪಾಗುತ್ತಿತ್ತು. ಆದರೆ, 75% ನಷ್ಟು ನಿಗದಿಯಾಗಿದ್ದರೂ ನಾವು 82.3% ನಷ್ಟು ರಿಯಾಯಿತಿ ಕೊಡುತ್ತಿದ್ದೇವೆ. ಅವರು ಈಗ 17.7% ಕಟ್ಟಿದ್ದಾರೆಂದು ಈಗಾಗಲೇ ಮಾಹಿತಿಯನ್ನು ಕೊಟ್ಟಿದ್ದೇವೆ. ಇದರಲ್ಲಿ ಸ್ವಲ್ಪ ಜಾಸ್ತಿ ಮಾಡಿದಾಗ ತಮ್ಮೆಲ್ಲರ ಸಲಹೆ ಮೇರೆಗೆ ಸ್ವಲ್ಪ ಕಡಿಮೆ ಮಾಡಿದಾಗ ಸ್ಟೂಡೆಂಟ್ ಫೆಡರೆಷನ್‌ವರು ಮತ್ತು ಯೂನಿಯನ್‌ರವರೆಲ್ಲರೂ ನನ್ನ ಹತ್ತಿರ ಬಂದು ಅವರುಗಳ ವಂದನೆಗಳನ್ನು ಮತ್ತು ನಮಸ್ಕಾರವನ್ನು ಹೇಳಿ ಕೃತಜ್ಞತೆಯ ಪತ್ರವನ್ನು ಕೊಟ್ಟು ಬಹಳ ಸಂತೋಷವಾಗಿದ್ದೇವೆಂದು ಹೇಳಿ ಹೋಗಿದ್ದಾರೆ. ಆದ್ದರಿಂದ, ಸಂಸ್ಥೆ ಕೂಡ ಉಳಿದರೆ ಮಾತ್ರ ಹೊಸ ಬಸ್‌ಗಳನ್ನು ಹಾಕುವುದಕ್ಕೆ ಮತ್ತು ಹೊಸದಾಗಿ ಬಸ್ ಸ್ಟ್ಯಾಂಡ್ ಕಟ್ಟುವುದಕ್ಕೆ ಸಾಧ್ಯವಾಗುತ್ತದೆ. ಸಂಸ್ಥೆಯನ್ನು ನಾವು ಕಮರ್ಷಿಯಲ್ ಉದ್ದೇಶದಿಂದ ನಡೆಸುತ್ತಿಲ್ಲ. ಹಳ್ಳಿಗಳ ಕಡೆ ಬಸ್ ಹಾಕಬೇಕೆಂದು ಮತ್ತು ವಿದ್ಯಾರ್ಥಿಗಳಿಗೋಸ್ಕರ ಬಸ್ ಕಳುಹಿಸಬೇಕೆಂದು ಮತ್ತು ಅಲ್ಲಿಂದ ನಮಗೆ ರೆವಿನ್ಯೂ ಬರಲಿ ಅಥವಾ ಬಾರದಿರಲಿ ವಿದ್ಯಾರ್ಥಿಗಳಿಗೋಸ್ಕರ ಬಸ್‌ನ್ನು ಕಳೂಹಿಸುತ್ತಿದ್ದೇವೆ. ಮತ್ತೆ 40 ಕಿ.ಮೀ ಇರತಕ್ಕಂಥದನ್ನು 50 ಕಿ.ಮೀ ಗೆ ಮಾಡಿದ್ದೇವೆ. 50 ಕಿ.ಮೀ ಗೆ ಮತ್ತೆ ಹೆಚ್ಚಿಗೆ ಮಾಡಿಲ್ಲ. ಎವರೇಜ್ 19 ಕಿ.ಮೀ ಗೆ 22 ದಿವಸಗಳಿಗೆ ಲೆಕ್ಕ ಹಾಕಿ 10 ತಿಂಗಳಿಗೆ ಈಗ ಕೊಟ್ಟಿದ್ದೇವೆ. ಈಗ 12 ತಿಂಗಳೂ ಕೂಡ ಪಾಸ್‌ಬೇಕೆಂದು ಕೇಳುತ್ತಿದ್ದಾರೆ. ಇದನ್ನೂ ಸಹ ಕೊಡಬೇಕೆಂಬುದರ ಬಗ್ಗೆ ಚಿಂತನೆ ನಡೆಸಿದ್ದೇವೆ. ವಿದ್ಯಾರ್ಥಿಗಳಿಗೆ ಸರ್ಕಾರದಿಂದ ಮತ್ತು ಸಂಸ್ಥೆಯಿಂದ ಸಾಕಷ್ಟು ಅನುಕೂಲವಾಗುತ್ತಿದೆ. ಅವರಿಗೆ 82.3% ನಷ್ಟು ರಿಯಾಯಿತಿ ಇರುವುದರಿಂದ ಮತ್ತೆ ಇದು ಹೆಚ್ಚು

ಎಂದುಕೊಳ್ಳುವುದು ಸೂಕ್ತವಲ್ಲ. ಮತ್ತೆ ಮಾನ್ಯ ಮಾಧುಸ್ವಾಮಿಯವರು ಒಂದೆರಡು ವಿಚಾರಗಳನ್ನು ಹೇಳಿದರು. ಇಡೀ ರಾಜ್ಯದಲ್ಲಿ ಬಸ್ ಸ್ಟ್ಯಾಂಡ್‌ಗಳನ್ನು ನವೀಕರಣ ಮಾಡತಕ್ಕಂಥ ಕೆಲಸ ಆಗಬೇಕು. ನಮಗೆ ಲಾಭ ಇರಲಿ, ನಷ್ಟವಿರಲಿ ಇವತ್ತಿನ ದಿವಸ ಗ್ರಾಮೀಣ ಪ್ರದೇಶಗಳಿಂದ ಕೇವಲ 20% ರೆವಿನ್ಯೂ ಬರುತ್ತದೆ. ಅಂದರೆ, ಅಲ್ಲಿ 100 ರೂ. ಖರ್ಚಾದರೆ ಕೇವಲ 20 ರೂ. ಬರುತ್ತಿದೆ. 80% ನಷ್ಟು ನಷ್ಟವಾದರೂ ಕೂಡ ಗ್ರಾಮೀಣ ಪ್ರದೇಶದಲ್ಲಿ ಬಸ್‌ನ ಸೌಕರ್ಯವನ್ನು ನಾವು ಕೊಡುತ್ತಿದ್ದೇವೆ. ಮತ್ತೆ ಖಾಸಗಿ ಬಸ್‌ಗಳಿಗಿಂತ ಪ್ರಬಲವಾದಂಥ ರೀತಿಯಲ್ಲಿ ಕೆಲಸ ಮಾಡುತ್ತಿದೆ. ಇಡೀ ರಾಷ್ಟ್ರದಲ್ಲಿಯೇ ಪ್ರಥಮ ಸ್ಥಾನವನ್ನು ಪಡೆದುಕೊಂಡು ಒಳ್ಳೆಯ ರೀತಿಯ ಸೌಕರ್ಯವನ್ನು ನೀಡುತ್ತಿದೆ. ಇವತ್ತಿನ ದಿವಸ ನಮ್ಮ ಸಾರಿಗೆ ವ್ಯವಸ್ಥೆಯ ಬಗ್ಗೆ ಪ್ರಜಾವಾಣಿ ಮತ್ತು ಡೆಕ್ಕನ್ ಹೆರಾಲ್ಡ್ ಪತ್ರಿಕೆಯವರು ಸಾರ್ವಜನಿಕರ ಅಭಿಪ್ರಾಯ ಕೇಳಿದಾಗ 80% ನಮ್ಮ ಪರವಾಗಿ ಹೇಳಿಕೆಯನ್ನು ಕೊಟ್ಟಿದ್ದಾರೆ. ಆದ್ದರಿಂದ, ಮಾನ್ಯ ಹಿರಿಯ ಸದಸ್ಯರುಗಳಲ್ಲಿ ನಾನು ಮತ್ತೊಮ್ಮೆ ವಿನಂತಿ ಮಾಡುವುದೇನೆಂದರೆ, ಲಾಭ ಮಾಡುವ ಉದ್ದೇಶದಿಂದ ಸಂಸ್ಥೆಯನ್ನು ಇಟ್ಟಿಲ್ಲ. ಆದರೆ, ಜನರಿಗೆ ಪ್ರತಿನಿತ್ಯ ಹೆಚ್ಚು ಸರ್ವಿಸ್‌ನ್ನು ಕೊಡಬೇಕಾದಾಗ ಕನಿಷ್ಟ ಮಾರ್ಜಿನ್ ರೀತಿಯಲ್ಲಿ ಸಂಸ್ಥೆಯನ್ನು ನಡೆಸಬೇಕಾಗುತ್ತದೆ. ತುಂಬಾ ಲಾಸ್‌ಗೆ ಹೋದಾಗ ಸಂಸ್ಥೆ ಕೆಲಸ ಮಾಡುವುದಕ್ಕೆ ಬಹಳ ಕಷ್ಟವಾಗುತ್ತದೆ. ಆದ್ದರಿಂದ, ತಾವು ಇದಕ್ಕೆ ಸಹಕರಿಸಬೇಕೆಂದು ವಿನಯ ಪೂರ್ವಕವಾಗಿ ವಿನಂತಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು :– ಆಯಿತು, ಮುಂದಿನ ಪ್ರಶ್ನೆ ಮಾನ್ಯ ಕಿರಣ್ ಕುಮಾರ್‌ರವರದು.

ಶ್ರೀ ಜೆ.ಸಿ. ಮಾಧುಸ್ವಾಮಿ :– ಮಾನ್ಯ ಅಧ್ಯಕ್ಷರೆ, ಅವರು ಹೇಳತಕ್ಕಂಥದ್ದನ್ನು ನಾನು ಒಪ್ಪುವುದಿಲ್ಲ. ಏಕೆಂದರೆ, ಗ್ರಾಮೀಣ ಪ್ರದೇಶದಲ್ಲಿ ಬಸ್ ಓಡಿಸತಕ್ಕಂಥದ್ದು ವಯಬಲ್ ಅಲ್ಲವೆಂದು ಅವರ ಜನರಲ್ ಮ್ಯಾನೇಜರ್‌ರವರು ಪತ್ರ ಕೊಟ್ಟಿದ್ದಾರೆ.

(ಗೊಂದಲ)

ಅಧ್ಯಕ್ಷರು :– ಪ್ರಶ್ನೋತ್ತರ ವೇಳೆಯಲ್ಲಿ ಇಷ್ಟು ಜನರು ಪ್ರಶ್ನೆ ಕೇಳಿದರೆ ಏನು ಮಾಡುವುದು?

(ಗೊಂದಲ)

ಶ್ರೀ ಜೆ.ಸಿ. ಮಾಧುಸ್ವಾಮಿ :– ಗ್ರಾಮೀಣ ಪ್ರದೇಶದಲ್ಲಿ ಬಸ್ ಓಡಿಸತಕ್ಕಂಥದು ವಯಬಲ್ ಅಲ್ಲವೆಂದು ಅವರ ಜನರಲ್ ಮ್ಯಾನೇಜರ್‌ರವರು ನನಗೆ ಪತ್ರ ಕೊಟ್ಟಿದ್ದಾರೆ. ಆದರೆ, ಬಸ್ ಸೌಕರ್ಯ ಕೊಡುತ್ತಿದ್ದೇವೆಂದು ಇವರು ಹೇಳುತ್ತಿದ್ದಾರೆ.

ಅಧ್ಯಕ್ಷರು :– ಬೇಡಿಕೆ ಮೇಲೆ ಮಾತನಾಡುವಂಥ ಸಂದರ್ಭದಲ್ಲಿ ಈ ವಿಷಯದ ಬಗ್ಗೆ ಪ್ರಸ್ತಾಪ ಮಾಡಿ. ಆಗ ಉತ್ತರ ಹೇಳುತ್ತಾರೆ. ಪ್ರಶ್ನೋತ್ತರ ವೇಳೆಯಲ್ಲಿ ಹೆಚ್ಚಿಗೆ ಅವಕಾಶ ಕೊಡುವುದಕ್ಕೆ ಆಗುವುದಿಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ :– ಅವರು ನನಗೆ ಕೊಟ್ಟಿರುವ ಪತ್ರವನ್ನು ತಂದು ಕೊಡುತ್ತೇನೆ. ಸಾರಿಗೆ ಸಂಸ್ಥೆ ಕಮರ್ಷಿಯಲ್ ಸಂಸ್ಥೆಯಾಗಿದೆ. ನೀವು ಹೇಳುವ ರೂಟ್ ವಯಬಲ್ ಅಲ್ಲ. ಆದ್ದರಿಂದ, ಈ ರೂಟ್‌ನಲ್ಲಿ ಬಸ್ ಓಡಿಸುವುದಕ್ಕೆ ಆಗುವುದಿಲ್ಲವೆಂದು ನನಗೆ ಪತ್ರ ಬರೆದಿದ್ದಾರೆ. ಅದನ್ನು ತಂದು ಕೊಡುತ್ತೇನೆ. ಇದಕ್ಕೆ ಮಾನ್ಯ ಸಚಿವರು ಏನು ಮಾಡುತ್ತಾರೆಂಬುದನ್ನು ಹೇಳಬೇಕು. ಗುಡ್ಡಗಾಡು, ಹಳ್ಳಿಗಾಡಿಗೆ ಬಸ್ ಕಳುಹಿಸಿ ಎಂದರೆ, ಇಲ್ಲಿಗೆ ಕಳುಹಿಸುವುದಕ್ಕೆ ಆಗುವುದಿಲ್ಲ ಮತ್ತೆ ಇಲ್ಲಿ ಕಲೆಕ್ಷನ್ ಕೂಡ ಆಗುವುದಿಲ್ಲ, ಇದು ವಯಬಲ್ ಅಲ್ಲವೆಂದು ನನಗೆ ಸ್ಪಷ್ಟವಾಗಿ ಕಾಗದ ಬರೆಯುತ್ತಾರೆ.

ಶ್ರೀ ಎನ್. ಚೆಲುವರಾಯಸ್ವಾಮಿ :– ಕೆಲವು ರೂಟ್‌ನಲ್ಲಿ ಲಾಸ್ ಆದರೂ ಪರವಾಗಿಲ್ಲ, ಎಲ್ಲಿ ಬಸ್ ಸೌಕರ್ಯ ಇಲ್ಲವೋ ಅಲ್ಲಿಯ ಮಾಹಿತಿಯನ್ನು ದಯಮಾಡಿ ಕಳುಹಿಸಿಕೊಡಿ ಅಲ್ಲಿಗೆ ಬಸ್ ಸೌಕರ್ಯ ಕಲ್ಪಿಸಿಕೊಡುತ್ತೇವೆ.

ಅಧ್ಯಕ್ಷರು :– ಆಯಿತು.

(ಗೊಂದಲ)

ಶ್ರೀ ಎನ್. ರಾಜೇಂದ್ರನ್ :– ಅದು ಸಿಟಿ ಅಥವಾ ರೂರಲ್ ಆಗಿರಲಿ, ಅಲ್ಲಿ ಬಸ್ ಸೌಕರ್ಯ ಇಲ್ಲದಿದ್ದರೆ ಅಲ್ಲಿಗೆ ಬಸ್ ಸೌಕರ್ಯ ಕಲ್ಪಿಸಿ ಕೊಡಬೇಕು.

(ಗೊಂದಲ)

ಅಧ್ಯಕ್ಷರು :– ಈ ರೀತಿಯಾದರೆ ಪ್ರಶ್ನೋತ್ತರ ನಡೆಸುವುದಕ್ಕೆ ಆಗುವುದಿಲ್ಲ. ಮಾನ್ಯ ಕಿರಣ್ ಕುಮಾರ್‌ರವರೆ ನಿಮ್ಮ ಪ್ರಶ್ನೆಯನ್ನು ಕೇಳಿ.

ಶ್ರೀ ಎನ್. ರಾಜೇಂದ್ರನ್ :– ನನ್ನ ಪ್ರಶ್ನೆಗೆ ಉತ್ತರ ಕೊಡಿಸಿ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ :– ನಮ್ಮ ಸಂಸ್ಥೆ ಹೆಚ್ಚು ಲಾಭದಾಯಕವಾಗಿ ನಡೆಯುತ್ತಿದೆ ಎಂದು ಒಂದು ಕಡೆ ಹೇಳುತ್ತಾರೆ. ಮತ್ತೆ ಲಾಭದಾಯಕವಾಗಿ ನಡೆಯುತ್ತಿದೆಂದು ಸಮಾರಂಭವನ್ನು ಮಾಡಿಕೊಳ್ಳುತ್ತಾರೆ ಮತ್ತೆ ಮಾನ್ಯ ಮುಖ್ಯಮಂತ್ರಿಗಳು ಇವರಿಗೆ ಅಭಿನಂದನೆ ಸಲ್ಲಿಸಿಸುತ್ತಾರೆ. ಇಷ್ಟೆಲ್ಲಾ ಹೇಳಿದ ಮೇಲೂ ಮತ್ತೆ ಬೆಲೆ ಏರಿಸತಕ್ಕಂಥ ಕೆಲಸ ಮಾಡಿದ್ದಾರೆ. ಇದು ಯಾವ ನೀತಿ?

(ಗೊಂದಲ)

ಅಧ್ಯಕ್ಷರು :– ಈಗ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಮಾತನಾಡುತ್ತಾರೆ ಕೇಳಿ.

(ಗೊಂದಲ)

ಶ್ರೀ ಎನ್. ಚೆಲುವರಾಯಸ್ವಾಮಿ :– ಅವರ ತೀರ್ಮಾನ ಏನಿದೆಯೋ ಅದರಂತೆ ನಾವು ನಡೆದುಕೊಳ್ಳುತ್ತೇವೆ.

ಅಧ್ಯಕ್ಷರು :– ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಮಾತನಾಡುತ್ತಾರೆ. ಎಲ್ಲರೂ ಕುಳಿತುಕೊಳ್ಳಿ.

(12 : 00 ಘಂಟೆ)

ಶ್ರೀ ಮಲ್ಲಿಕಾರ್ಜುನ ಖರ್ಗೆ :– ಮಾನ್ಯ ಅಧ್ಯಕ್ಷರೆ, ಚಲುವರಾಯ ಸ್ವಾಮಿಯವರಿಗೆ ಯಾರು advice ಮಾಡುತ್ತಾರೋ ಗೊತ್ತಿಲ್ಲ. ಮೊದಲು ಲಾಭದಲ್ಲಿದೆ ಎಂದು statement ಕೊಟ್ಟು ಬಿಡುವುದು, ಈಗ ಲಾಭದಲ್ಲಿದ್ದಾಗ ಪುನಃ ಬಸ್‌ಚಾರ್ಜ್ ಜಾಸ್ತಿ ಮಾಡುತ್ತೇವೆಂದು ಹೇಳಿ, next day ಕೊಟ್ಟು ಬಿಡುವುದು. ಒಂದು ಕಡೆ ಲಾಭದಲ್ಲಿದೆ ಎಂದು ಹೇಳಿಕೊಂಡು ಶಹಬ್ಬಾಸ್‌ಗಿರಿಯನ್ನು ಪಡೆಯುತ್ತೀರಿ. ಇನ್ನೊಂದು ಕಡೆ ನಾನು infrastructure ಗೋಸ್ಕರ ಮತ್ತು ಲಾಭವನ್ನು ಮತ್ತು ನಷ್ಟವನ್ನು ಭರಿಸುವುದಕ್ಕೋಸ್ಕರ ನಾವು enhance ಮಾಡುತ್ತೇವೆಂದು ಹೇಳಿ, ಇದು ಎರಡು statement ನಿಜವಾಗಲು contradict ಆಗಿದೆ. ಇದರಿಂದ ಜನರಿಗೆ ಏನು ಅನಿಸುತ್ತದೆ. ಲಾಭ ಇದ್ದರೂ ಕೂಡ ಇವರು purposely ಏರಿಸುತ್ತಿದ್ದೀರಾ, ಏಕೆಂದರೆ diesel price ಏರಲಿಲ್ಲ. ಸಡನ್ನಾಗಿ spare parts ಹೆಚ್ಚಿಗೆ ಆಗಲಿಲ್ಲ. ಬಸ್ಸಿನ ಬೆಲೆ ಏನು ಹೆಚ್ಚಾಗಲಿಲ್ಲ. ಸಡನ್ನಾಗಿ ನಮಗೆ ಲಾಭವಿದೆ ಎಂದು ಹೇಳುವುದು. ಇದರಿಂದ ಏನಾಗಿದೆ, ಸಾರ್ವಜನಿಕರಿಗೆ ಯಾವಾಗ ಲಾಭವಿದೆ ಎಂದರೆ, ಇವರು ಏಕೆ ಏರಿಸುತ್ತಾರೆ. ವಿದ್ಯಾರ್ಥಿಗಳಿಗೆ ಅನುಕೂಲವಾಗಲಿ ಎಂದು ಎಲ್ಲಾ

Government ಗಳು ಕೂಡ concession ಕೊಟ್ಟುಕೊಂಡು ಬಂದಿವೆ. ಈಗ ಲಾಭವಿದ್ದಾಗ ಆ concession ನ್ನು ಪುನಃ enhance ಮಾಡಿ ಆ ವಿದ್ಯಾರ್ಥಿಗಳಿಗೆ, ನೀವು ಮಾನ್ಯ ನರೇಂದ್ರಬಾಬುರವರು ಹೇಳಿದಂತೆ, 200% ಏರಿಸುವುದು ಆಮೇಲೆ agitation ಮಾಡುತ್ತಾರೆಂದು ಹೇಳಿ, 100% ಕ್ಕೆ ಬಂದು ಬಿಡುವುದು. ಏಕೆಂದರೆ ಮೊದಲು enhance ಮಾಡಿದ್ದು 200% ನಂತರ 100% ಗೆ ಬರುವುದು. ಅದಕ್ಕಾಗಿ ನಾನು ತಮ್ಮ ಮುಖಾಂತರ ಕೇಳಿಕೊಳ್ಳತಕ್ಕಂಥದ್ದು. ಇದರಲ್ಲಿ ನಿಮಗೆ advice ಮಾಡಿದವರದ್ದು ತಪ್ಪು. ಇಲ್ಲಾ ನೀವು ಒಪ್ಪಿಕೊಳ್ಳಿ. ನಾವು ನಷ್ಟದಲ್ಲಿದ್ದೇವೆ ಅದಕ್ಕಾಗಿ ನಾವು enhance ಮಾಡಬೇಕೆಂದು ಹೇಳಿ. ಇಲ್ಲಾ ಹಳ್ಳಿಯಲ್ಲಿರತಕ್ಕಂಥ ಜನರಿಗೆ ಸೌಲಭ್ಯವನ್ನು ಕೊಡುವುದಕ್ಕೆ ಅಥವಾ ಅಲ್ಲಿಯ ಬಸ್ಸುಗಳು ನಷ್ಟದಲ್ಲಿ ಓಡುತ್ತೀವೆ ಅಥವಾ ಮಾಧುಸ್ವಾಮಿಯವರು ಹೇಳಿದ ಹಾಗೆ, ಕೆಲವು ರೂಟ್‌ಗಳಲ್ಲಿ ಆಗಿರುವ ನಷ್ಟವನ್ನು ಸರಿಪಡಿಸಲು ಮಾಡುವುದಕ್ಕೆ ಮಾಡಿದ್ದೇವೆಂದು ಹೇಳಿದ್ದರೆ ಅದಕ್ಕೊಂದು ಅರ್ಥವಿತ್ತು, ಅದು ಇಲ್ಲ. ಈಗಾಗಲೇ K.S.R.T.C. profit ನಲ್ಲಿದೆ. B.M.T.C ಅಂತು ಹೆಚ್ಚಿನ profit ನಲ್ಲಿದೆ. Accumulated loss ನಲ್ಲಿರತಕ್ಕಂಥವು ಎರಡೇ ಎರಡು. ಒಂದು any K.S.R.T.C ಇನ್ನೊಂದು Hubli-Dharwad. ಈ ಎರಡು ಕೂಡ accumulated loss ಇವೆ. ಅದನ್ನು ಬಿಟ್ಟರೆ ಈ ಎರಡರಲ್ಲಿ ಹೆಚ್ಚಿನ ಲಾಭವಿದೆ. ಅದಕ್ಕೆ compare ಮಾಡಿದಾಗ ಇದೆಲ್ಲಾ loss wipe out ಆಗುತ್ತದೆ. ಆದರೂ ಕೂಡ ನೀವು ಯಾರ ಮಾತನ್ನು ಕೇಳಿ enhance ಮಾಡಿದ್ದೀರಿ. students ಗಳನ್ನು ನಾವು ರೊಚ್ಚಿಗೆ ಎಬ್ಬಿಸಿಲ್ಲ. ಅನೇಕ ಕಡೆ ನಾವು ಸಮರ್ಥನೆ ಮಾಡಿಕೊಂಡಿದ್ದೇವೆ. ಇದು public sectors ಉಳಿಯಬೇಕು. ಸಾಕಷ್ಟು public sector ಅನ್ನು ಹಾಳು ಮಾಡತಕ್ಕಂಥ ಜನ ಈ ದೇಶದಲ್ಲಿ ಈಗ ಹುಟ್ಟಿದ್ದಾರೆ. Liberalization ಹೆಸರಿನಲ್ಲಿ ನಾವೆಲ್ಲರೂ ಕೂಡ public sector ಗಳನ್ನು ಒಂದೊಂದಾಗಿ ಮುಗಿಸುತ್ತಿದ್ದೇವೆ. ಅದು ಆಗಬಾರದು ಎನ್ನುವ ಒಂದು ತಾಳ್ಮೆಯಿಂದ ನಾವು ಅನೇಕ ಜನರಿಗೆ ಹೇಳಿಕೊಂಡು ಬಂದಿದ್ದೇವೆ. ಆದರೆ ನೀವು ಅದರ ಲಾಭವನ್ನು ಪಡೆದುಕೊಂಡು ನಿಮಗೆ ಇಚ್ಛೆ ಬಂದಂತೆ ಅಥವಾ ನಿಮಗೆ ಯಾರು advice ಮಾಡುತ್ತಾರೆ ಅವರ ಮಾತನ್ನು ಕೇಳಿ, ಇದನ್ನು enhance ಮಾಡುತ್ತಿದ್ದೀರಿ ಇದು ಸರಿಯಲ್ಲ. ನಿಮಗೆ ಲಾಭವಿಲ್ಲವೆಂದರು ಕೆಲವು ಸರ್ವಿಸ್‌ಗಳನ್ನು ಕೊಡಬೇಕಾಗುತ್ತದೆ. ಈಗ Hospital ನಡೆಸುತ್ತೀರಿ ಅಲ್ಲಿ ಲಾಭ ಇದೆಯಾ? ಶಾಲೆ ನಡೆಸುತ್ತೇವೆ ಲಾಭ ಇರುತ್ತದಾ? Primary School ನಡೆಸುತ್ತೇವೆ ಲಾಭ

ಇದೆಯಾ? ಹಾಗೆ K.S.R.T.C. ಕೂಡ Service Oriented Organization ಅದಕ್ಕಾಗಿ ಹೆಚ್ಚಿನ ಲುಕ್ಸಾನ್ ಆಗಬಾರದೆಂದು ನಮ್ಮ ಎಲ್ಲರ ಗಮನ. ಅದರ ಅರ್ಥ ಇದು ಅಲ್ಲ. ಲಾಭವಿದ್ದರು ಕೂಡ ಜನರನ್ನು ಶೋಷಣೆ ಮಾಡಬೇಕೆಂದು ನಿಮ್ಮ ಉದ್ದೇಶವೇ ಅದಕ್ಕಾಗಿ ನೀವು ಇದನ್ನು ಪುನರ್ ಪರಿಶೀಲನೆ ಮಾಡಬೇಕು. ನೀವು ಈಗ ಏನು enhance ಮಾಡಿದ್ದೀರಿ ಅದು ಸರಿಯಿಲ್ಲ. ನೀವು ಹೇಳಿದಂಥ ಮಾತಿಗೆ ಇದು contradiction ಆಗುತ್ತದೆ.

ಶ್ರೀ ಪದ್ಮನಾಭ ಕೊಠಾರಿ :- ಮಾನ್ಯ ಅಧ್ಯಕ್ಷರೆ, ನಾನು ಪ್ರಶ್ನೆ ಕೇಳಿರುವುದು.

ಶ್ರೀ ಗೋಪಾಲಕೃಷ್ಣ ಬೇಳೂರು :- ಈಗ ಲಾಭದಲ್ಲಿದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ :- ಇಲ್ಲಾ ನೀವು ಒಬ್ಬರೆ ಲಾಭ ಮಾಡಿದ್ದು

(ಗೊಂದಲ)

ಒಬ್ಬ ಮಾನ್ಯ ಸದಸ್ಯರು :- ವಿದ್ಯಾರ್ಥಿಗಳ ಪಾಸ್‌ನ್ನು ಹೆಚ್ಚಿಗೆ ಮಾಡಿದ್ದು ಇದು ಸರಿನಾ?

(ಗೊಂದಲ)

ಅಧ್ಯಕ್ಷರು :- ಎಲ್ಲರೂ ಏಕೆ ಎದ್ದುನಿಂತುಕೊಂಡಿದ್ದೀರಿ, ಕುಳಿತುಕೊಳ್ಳಿ.

ಶ್ರೀ ಪದ್ಮನಾಭ ಕೊಠಾರಿ :- ಈ ಬೆಲೆ ಏರಿಕೆಯಿಂದ ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಿಗೆ ಬಹಳಷ್ಟು ತೊಂದರೆಯಾಗಿದೆ, ಅವರಿಗೆ ನೀವು ಏನು ಅನುಕೂಲತೆಯನ್ನು ಮಾಡಿದ್ದೀರಿ.

ಅಧ್ಯಕ್ಷರು :- ಮಾನ್ಯ ಕೊಠಾರಿಯವರೆ, ನಿಮ್ಮನ್ನು ಮಾತನಾಡಲು ಕರೆದವರು ಯಾರು?

ಅಧ್ಯಕ್ಷರು :- permission ಇಲ್ಲದೇ ಯಾರು ಈ ರೀತಿ ಮಾತಾನಾಡುವುದು ಸರಿಯಲ್ಲ.

ಶ್ರೀ ಪದ್ಮನಾಭ ಕೊಠಾರಿ :- ನಾನು ಪ್ರಶ್ನೆ ಕೇಳಿರುವುದು ಸರ್.

ಅಧ್ಯಕ್ಷರು :- ಆಯಿತು ಕೇಳಿ ಕೇಳಿ, ತಮಗೆ ಇಷ್ಟಬಂದಂತೆ ಎಲ್ಲರೂ ಎದ್ದುನಿಂತುಕೊಂಡು ಮಾತನಾಡಿದರೆ ಹೇಗೆ.

(ಗೊಂದಲ)

ಶ್ರೀ ಸಿ.ಸಿ. ಪಾಟೀಲ್ :– ಮಾನ್ಯ ಅಧ್ಯಕ್ಷರೆ, ಈ ಪ್ರಶ್ನೆ ಮಾನ್ಯ ಕೊಠಾರಿಯವರದ್ದು ಇದೆ. ಅವರಿಗೆ ಅವಕಾಶ ಕೊಡುವುದಿಲ್ಲವೆಂದರೆ ಹೇಗೆ?

ಅಧ್ಯಕ್ಷರು :– ಆಯಿತು. ಎಷ್ಟು ಸಲ ಮಾತನಾಡುವುದು. ಎಷ್ಟು ಜನ ಉಪ ಪ್ರಶ್ನೆಯನ್ನು ಕೇಳುವುದು.

ಶ್ರೀ ಪದ್ಮನಾಭ ಕೊಠಾರಿ :– ಮಾನ್ಯ ಸಚಿವರು ನನ್ನ ಪ್ರಶ್ನೆಗೆ ಉತ್ತರವನ್ನು ಕೊಡಬೇಕು.

(ಗೊಂದಲ)

ಅಧ್ಯಕ್ಷರು :– ಆಯಿತು ಕುಳಿತುಕೊಳ್ಳಿ.

ಶ್ರೀ ಪದ್ಮನಾಭ ಕೊಠಾರಿ :– ಗ್ರಾಮೀಣ ಪ್ರದೇಶಕ್ಕೆ ಇವತ್ತು ಬಸ್ಸುಗಳನ್ನು ಕಳುಹಿಸುವುದನ್ನು ನಿಲ್ಲಿಸಿದ್ದಾರೆ.

ಶ್ರೀ ಸಿದ್ದು ಸವದಿ :– ಪ್ರಶ್ನೆ ಅವರದ್ದು ಇದೆ. ಅವರಿಗೆ ಏಕೆ ಅವಕಾಶವನ್ನು ಕೊಡುತ್ತಿಲ್ಲ.

(ಗೊಂದಲ)

ಅಧ್ಯಕ್ಷರು :– ಮಾನ್ಯ ಬಸವರಾಜುರವರೆ ತಾವು ಕುಳಿತುಕೊಳ್ಳಿ. ಈ ವಿಷಯ ರಾಜ್ಯಕ್ಕೆ ಸಂಬಂಧಪಟ್ಟಿರುವುದರಿಂದ ಉಪ ಪ್ರಶ್ನೆಯನ್ನು ಬೇರೆ ಬೇರೆಯವರು ಕೇಳಿದ್ದಾರೆ. ಎಲ್ಲರೂ ಈ ರೀತಿ ಉಪ ಪ್ರಶ್ನೆಯನ್ನು ಕೇಳಿಕೊಂಡು ಕುಳಿತುಕೊಂಡರೆ ಹೇಗೆ? ಪ್ರಶ್ನೋತ್ತರವನ್ನು ಮುಗಿಸುವುದು ಹೇಗೆ?

ಶ್ರೀ ಸಿ.ಸಿ. ಪಾಟೀಲ್ :– ಪ್ರಶ್ನೆ ಕೇಳಿದವರು ಬಿಟ್ಟು, ಬೇರೆಯವರು ಏಕೆ ಉಪ ಪ್ರಶ್ನೆಯನ್ನು ಕೇಳುತ್ತಾರೆ. ಪ್ರಶ್ನೆ ಕೇಳಿದವರಿಗೆ ಅವಕಾಶವಿಲ್ಲವೆಂದರೆ ಇದು ಯಾವ ನ್ಯಾಯ ಸ್ವಾಮಿ.

ಅಧ್ಯಕ್ಷರು :– ಆಯಿತು ಕುಳಿತುಕೊಳ್ಳಿ.

ಶ್ರೀ ಸಿ.ಸಿ. ಪಾಟೀಲ್ :– ಆಯಿತು ಕುಳಿತುಕೊಳ್ಳುತ್ತೇವೆ ಬಿಡಿ ಸರ್.

ಶ್ರೀ ಪದ್ಮನಾಭ ಕೊಠಾರಿ :– ಮಾನ್ಯ ಸಚಿವರು ಉತ್ತರವನ್ನು ಕೊಡಲಿ.

ಅಧ್ಯಕ್ಷರು :- ಉತ್ತರವನ್ನು ಕೊಡಿ.

ಶ್ರೀ ಎನ್. ಚೆಲುವರಾಯಸ್ವಾಮಿ :- ಮಾನ್ಯ ಅಧ್ಯಕ್ಷರೆ, supplementary ಪ್ರಶ್ನೆಯನ್ನು ಜಾಸ್ತಿ ಕೇಳಿರುವುದರಿಂದ ನನಗೆ ಅವಕಾಶವಿಲ್ಲವೆಂದು ಅವರು ಹೇಳುತ್ತಿದ್ದಾರೆ. ಅವರು ಹೇಳಿರತಕ್ಕಂಥ ಎಲ್ಲಾ ವಿಚಾರಗಳಲ್ಲೂ ನಾವು ಗಮನವನ್ನು ಹರಿಸಿದ್ದೇವೆ. ಮಾನ್ಯ ಖರ್ಗೆಯವರು ಕೂಡ ಹಿರಿಯ ಸಚಿವರಾಗಿದ್ದಾರೆ. ಈ ಇಲಾಖೆಯನ್ನು ಅವರು ಕೂಡ ಸಮರ್ಥವಾಗಿ ನಡೆಸಿದ್ದಾರೆ. ಯಾರ ಒಬ್ಬರ ಆಸ್ತಿಯು ಅಲ್ಲ. ನಾನೊಬ್ಬ ಇದನ್ನು ಉದ್ಧಾರ ಮಾಡಿದ್ದೇನೆಂದು ಎಲ್ಲೂ ಹೇಳಿಲ್ಲ. ಮಾನ್ಯ ಸೀತಾರಾಮರವರು ಬಹಳ ವ್ಯಕ್ತಪಡಿಸಿದರು. ಇದಕ್ಕೆ ಹತ್ತಾರು ವರ್ಷಗಳಿಂದ ಅನೇಕ ಸರ್ಕಾರ, ಅಧಿಕಾರಿಗಳ ಶ್ರಮದಿಂದ ಒಂದು ಒಳ್ಳೆಯ ಕೆಲಸ ಮಾಡುವುದಕ್ಕೆ ಪ್ರಯತ್ನ ಮಾಡಿದ್ದೇನೆಂದು ಹೇಳಬಹುದು. ವಿನಹಃ ನಾನು ಖಂಡಿತವಾಗಿ ಮಾಡಿದ್ದೇನೆಂದು ಎಲ್ಲೂ ಹೇಳಿಲ್ಲ. ಪತ್ರಿಕೆಯಲ್ಲಿಯೂ ಹೇಳಿಲ್ಲ. ಮಾನ್ಯ ಸೀತಾರಾಮರವರೆ ತಾವು ತಪ್ಪು ತಿಳಿದುಕೊಳ್ಳುವುದು ಬೇಡ. ಇದರಲ್ಲಿ ಮಾನ್ಯ ಖರ್ಗೆಯವರ, ಮಾನ್ಯ ಸಿಂಧ್ಯಾರವರ ಬಹಳ ಶ್ರಮವಿದೆ. ಬಹಳಷ್ಟು ಜನ ಮಂತ್ರಿಗಳು, ಅಧಿಕಾರಿಗಳು, ಅಲ್ಲಿರುವ ಡ್ರೈವರ್, ಕಂಡಕ್ಟರ್ ಆದಿಯಾಗಿ ಶ್ರಮದಿಂದ ಈ ಸಂಸ್ಥೆ ಕೆಲಸ ಮಾಡುತ್ತಿದೆಯೆ ವಿನಹಃ ಮಂತ್ರಿಗಳು. ಮತ್ತು ಎಂ.ಡಿ ಗಳು ಅಥವಾ ಸರ್ಕಾರದಿಂದ ಮಾತ್ರ ಕೆಲಸವಾಗಿದೆ ಎಂದು ನಾವು ಹೇಳುವುದು ಸೂಕ್ತವಲ್ಲ. ಇವತ್ತು ಸರ್ಕಾರ 25% ನಿಗದಿ ಮಾಡಿ, 10 ವರ್ಷದ ಹಿಂದೆ Students ಗೆ 75% concession ಕೊಡಬೇಕೆಂದು ಏನು ತೀರ್ಮಾನವಾಗಿತ್ತು ಅದಕ್ಕೆ ನಾವು ಇವತ್ತು ಬದ್ಧವಾಗಿದ್ದೇವೆ. 25% ಅವರು ಕಟ್ಟದಿರುವುದರಿಂದ ಸ್ವಲ್ಪ ಜಾಸ್ತಿ ಮಾಡಿದ್ದೇವೆ. ಈ ವರ್ಷ ಸ್ವಲ್ಪ ಹೆಚ್ಚು ಮಾಡಿರುವುದರಿಂದ ಅವರು ಸಾಕಷ್ಟು ಬೇಡಿಕೆಯನ್ನು ಸಲ್ಲಿಸಿದಾಗ ಅವರ ಜೊತೆಯಲ್ಲಿ ಕುಳಿತುಕೊಂಡು ಚರ್ಚೆ ಮಾಡಿ ಹಂತ ಹಂತವಾಗಿ ಬೇಕಾದರೆ ಜಾಸ್ತಿ ಮಾಡಿ ಒಂದೇ ಸಲ ಜಾಸ್ತಿ ಮಾಡತಕ್ಕಂಥದ್ದು ಬೇಡ. 25% ಕಟ್ಟಲಿಕ್ಕೆ ನಾವು ರೆಡಿ ಇದ್ದೇವೆ, ಆದರೆ ಒಂದೇ ಸಲ ಜಾಸ್ತಿಯಾಗುತ್ತದೆ ಬೇಡ ಎನ್ನತಕ್ಕಂಥದ್ದನ್ನು ನಾವೆಲ್ಲರೂ ಕೂಡ ಚರ್ಚೆಯನ್ನು ಮಾಡಿರುತ್ತೇವೆ. ಇನ್ನು ಒಂದು ಸಾರಿ ಈ ಬಗ್ಗೆ ಚರ್ಚೆ ಮಾಡಿ, ಮಾನ್ಯ ಮಲ್ಲಿಕಾರ್ಜುನ ಖರ್ಗೆ, ಶ್ರೀ ನಾಗರಾಜು ಹಾಗೂ ಶ್ರೀ ಜಿ.ವಿ.ಶ್ರೀರಾಮರೆಡ್ಡಿಯವರ ಜೊತೆಯಲ್ಲಿ ಚರ್ಚೆ ಮಾಡಿ ನಾನು ಅವರ ಮನವೊಲಿಸುವಂತಹ ಮಾತುಗಳನ್ನು ನಾನು ಮಾಡುತ್ತೇನೆ. ಅಲ್ಲಿಂದ ಒಟ್ಟಾರೆ ಮಾನ್ಯ ಮಂಜುನಾಥ್‌ರವರು ಏನು ಹೇಳಿದ್ದಾರೆ. ಸಾರಿಗೆ ಸಂಸ್ಥೆ ಮತ್ತು ಸರ್ಕಾರ ಗ್ರಾಮೀಣ ಜನರಿಗೆ ಸರ್ವಿಸ್ ಕೊಡುವಂತಹದ್ದು, ವಿದ್ಯಾರ್ಥಿಗಳಿಗೆ ಸರ್ವಿಸ್

ಕೊಡುವುದರ ಬಗ್ಗೆ ಹೆಚ್ಚು ಕಾಳಜಿ ಇದೆ ಅದನ್ನು ನಾವು ಕಾಪಾಡುತ್ತೇವೆಂದು ಹೇಳುತ್ತೇನೆ. ಮಾನ್ಯ ಮಾಧುಸ್ವಾಮಿಯವರು ಏನು ಹೇಳಿದ್ದಾರೆ, ಅದರಲ್ಲಿ ಆದಾಯ ಇದೆಯೋ ಅಥವಾ ಇಲ್ಲವೋ ಹಳ್ಳಿ ಕಡೆಗಳಲ್ಲಿ ಸರ್ವಿಸ್ ಕೊಡುವುದರ ಬಗ್ಗೆ ನಮ್ಮದು ಯಾವ ತಕರಾರು ಇಲ್ಲ, ಅದನ್ನು ಮಾಡುತ್ತೇವೆ. ಮಾನ್ಯ ರಾಜೇಂದ್ರನ್ ರವರು ಬಸ್‌ಸ್ಟ್ಯಾಂಡ್‌ನ್ನು ಶಿಫ್ಟ್ ಮಾಡುವ ವಿಚಾರವನ್ನು ಹೇಳಿದ್ದಾರೆ, ಅದು ಪ್ರೈವೇಟ್ ಬಸ್‌ಸ್ಟ್ಯಾಂಡ್‌ನ್ನು ಶಿಫ್ಟ್ ಮಾಡಬೇಕಾಗಿರುವುದರಿಂದ ಸ್ವಲ್ಪ ವಿಳಂಬವಾಗಿತ್ತು. ನಾನು ರೆವಿನ್ಯೂ ಡಿ.ಸಿ.ಯವರ ಜೊತೆ ಮಾಡನಾಡಿ ಅವರ ಮೂಲಕವೇ ಇನ್ನು ಒಂದು ವಾರದೊಳಗಾಗಿ ಆ ಕೆಲಸವನ್ನು ಮಾಡುತ್ತೇವೆ.

<u>ಕಡಲ ತೀರದ ಬೀಚುಗಳನ್ನು ಅಭಿವೃದ್ಧಿ ಪಡಿಸುವುದು.</u>

103 (974) ಶ್ರೀ ಮೋಹನ್ ಕೃಷ್ಣ ಶೆಟ್ಟಿ (ಕುಮಟಾ) :- ಮಾನ್ಯ ಪ್ರವಾಸೋದ್ಯಮ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪ್ರವಾಸೋದ್ಯಮ ಇಲಾಖೆಯಿಂದ ಕುಮಟಾ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ಗೋಕರ್ಣದ ಓಂ ಬೀಚು, ಕೂಡ್ಲೆ ಬೀಚನಂತಹ ರಮಣೀಯ ಕಡಲ ತೀರದ ಬೀಚುಗಳನ್ನು ಅಭಿವೃದ್ಧಿ ಪಡಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ.

ಆ) ಈ ಕುರಿತಾಗಿ ಬೃಹತ್ ಯೋಜನೆಗಳನ್ನು ಕೈಗೊಳ್ಳಲಾಗುವುದೇ;

ಇ) ಹಾಗಿದ್ದಲ್ಲಿ ಯಾವಾಗ ಕ್ರಮ ಕೈಗೊಳ್ಳಲಾಗುವುದು?

ಶ್ರೀ ಬಿ. ಶ್ರೀರಾಮುಲು (ಪ್ರವಾಸೋದ್ಯಮ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು) :

ಅ) ಪ್ರವಾಸೋದ್ಯಮ ಇಲಾಖೆಯಿಂದ ಕುಮಟಾ ತಾಲ್ಲೂಕಿನ ಗೋಕರ್ಣದ ಬಳಿ ಇರುವ ಓಂ ಬೀಚನ್ನು ಅಭಿವೃದ್ಧಿಪಡಿಸುವ ಬಗ್ಗೆ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿತ್ತು. ಓಂ ಬೀಚಿನ ಬಳಿ ಇರುವ ಮೀನುಗಾರಿಕೆ ಇಲಾಖೆಗೆ ಸೇರಿದ ಇಂಡೋಡ್ಯಾನಿಷ್ ಕಟ್ಟಡವನ್ನು ದುರಸ್ತಿಗೊಳಿಸಿ ಪ್ರವಾಸಿಗರಿಗೆ ಒದಗಿಸುವ ಸಲುವಾಗಿ ಕೇಂದ್ರವು ಈ ಯೋಜನೆಗೆ 100.00 ಲಕ್ಷ ರೂ.ಗಳನ್ನು 3 ಕಂತುಗಳಲ್ಲಿ ಬಿಡುಗಡೆ ಮಾಡಿರುತ್ತದೆ. ಸದರಿ ಕಾಮಗಾರಿಯನ್ನು ಮೆ॥ ಜಂಗಲ್ ಲಾಡ್ಜಸ್ ಅಂಡ್ ರೆಸಾರ್ಟ್ ಸಂಸ್ಥೆಯ ಮೂಲಕ ಕೈಗೊಳ್ಳಲಾಗಿದ್ದು ಎಲ್ಲ ಕಾಮಗಾರಿಗಳು ಜುಲೈ 2005 ರಲ್ಲಿ ಪೂರ್ಣಗೊಂಡಿರುತ್ತದೆ.